ಮೂಲ ದಾವಾ ಸಂಖ್ಯೆ . 8/2016 ಡಿ ಡಬ್ಲ್ಯೂ 3

(ದಿನಾಂಕ 26-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ನಮ್ಮ ತಂದೆಯ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ನಮ್ಮ ತಂದೆಯವರು ಮರಣ ಹೊಂದಿರುತ್ತಾರೆ. ಸಾಕ್ಷಿಗೆ ನಿಡಿ-2 ಮೃತ್ಯುಪತ್ರವನ್ನು ತೋರಿಸಲಾಗಿ, ಸಾಕ್ಷಿಯು ಸದರಿ ಮೃತ್ಯುಪತ್ರದ 3 ನೇ ಪುಟದಲ್ಲಿ ಸಾಕ್ಷಿದಾರರ ಕ್ರಮ ಸಂಖ್ಯೆಃ 2 ರಲ್ಲಿರುವ ಸಹಿ ನಮ್ಮ ತಂದೆಯವರದು ಅಂತಾ ನೋಡಿ ಗುರುತಿಸಿದ್ದು ಇರುತ್ತದೆ. ಸದರಿ ಸಹಿಯನ್ನು ನಿಶಾನೆಗೊಳಿಸಲು ವಾದಿ ಪರ ವಕೀಲರು ತಕರಾರು ವ್ಯಕ್ತಪಡಿಸಿರುತ್ತಾರೆ. ಸದರಿ ಸಹಿಯನ್ನು ಕಾನೂನು ಸಮ್ಮತವಾಗಿ ರುಜುವಾತಿಗೆ ಒಳಪಟ್ಟು ನಿಡಿ-2 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯು ಮೃತ್ಯುಪತ್ರವಾಗಿರುತ್ತದೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ